**ಮೂಲ ದಾವಾ ನಂಃ 12/2020**

**ಡಿ. ಡಬ್ಲ್ಯು 2**

**(ಇಂದು ದಿನಾಂಕಃ 11.08.2025 ರಂದು ಡಿ.ಡಬ್ಲ್ಯು.2 ರವರನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.)**

**<u>ಪಾಟೀ ಸವಾಲುಃ ವಾದಿಯರ ಪರ ವಕೀಲರಾದ ಶ್ರೀ ಆರ್ ವಿ ಬಿ ರವರಿಂದಃ</u>**

ನಾನು ಬಿ.ಎ ಪದವೀಧರನಾಗಿರುತ್ತೇನೆ. ನಾನು ಅಂಚೆ ಇಲಾಖೆಯಲ್ಲಿ ನೌಕರನಾಗಿದ್ದೆ. ನಾನು ಅಂಚೆ ಇಲಾಖೆಯಲ್ಲಿ 1992 ರಿಂದ 2022 ರವರೆಗೆ ನೌಕರನಾಗಿದ್ದೆ. ನೀವು ಅಂಚೆ ಇಲಾಖೆಯಲ್ಲಿ ನೌಕರರಾಗಿದ್ದಾಗ ನಿಮ್ಮ ಕರ್ತವ್ಯದ ಅವಧಿ ಏನಾಗಿತ್ತು ಎಂದರೆ ಸಾಕ್ಷಿ ದಿನಕ್ಕೆ 3 ಗಂಟೆ ಅವಧಿ ಇದ್ದು ಬೆಳಿಗ್ಗೆ 9-00 ರಿಂದ 1-00 ಗಂಟೆಯವರೆಗೆ ಇತ್ತು ಅಂತಾ ಉತ್ತರಿಸುತ್ತಾರೆ.

2. ಈ ದಾವೆಯ ಪ್ರತಿವಾದಿ ನಿಮಗೆ ಎಷ್ಟು ವರ್ಷಗಳಿಂದ ಹಾಗೂ ಹೇಗೆ ಪರಿಚಯ ಎಂದರೆ ಸಾಕ್ಷಿ ಅವರು ನನಗೆ ಬಹಳ ವರ್ಷಗಳಿಂದ ಪರಿಚಯ ಇದ್ದು ಅವರು ನಮ್ಮ ನೆರೆ ಹೊರೆಯವರಾಗಿದ್ದರಿಂದ ಪರಿಚಯ ಅಂತಾ ಉತ್ತರಿಸುತ್ತಾರೆ. ಪ್ರತಿವಾದಿ ರಿಕ್ಷಾ ಚಾಲಕ ಎಂದರೆ ಸರಿ. ನೀವು ಹೃದಯ ಚಿಕಿತ್ಸೆಗೆ ಒಳಗಾಗಿದ್ದೀರಿ ಎಂದರೆ ಸರಿ. ಆದ್ದರಿಂದ ಪದೇ ಪದೇ ಚಿಕಿತ್ಸೆಗಾಗಿ ನೀವು ಕಾರವಾರ ಆಸ್ಪತ್ರೆಗೆ ಬರಬೇಕಾಗುತ್ತದೆ ಎಂದರೆ ಸರಿ. ನೀವು ಆಸ್ಪತ್ರೆಗೆ ಬರುವಾಗ ಪ್ರತಿವಾದಿಯ ರಿಕ್ಷಾದಲ್ಲೇ ಬರುವುದು ಎಂದರೆ ಸರಿ.

3. ನೀವು ಅಂಚೆ ಇಲಾಖೆಯಲ್ಲಿ ಕೆಲಸ ನಿರ್ವಹಿಸುವಾಗ ನಿಮ್ಮ ಹಾಗೂ ಇಲಾಖೆಯ ನಡುವೆ ವಿವಾದ ಉಂಟಾಗಿ ಕೇಸುಗಳು ಆಗಿವೆ ಎಂದರೆ ಸರಿಯಲ್ಲ. ಇಲ್ಲಿಯವರೆಗೆ ನಿಮ್ಮ ವಿರುದ್ಧ ಕೋರ್ಟ್ ನಲ್ಲಿ ಎಷ್ಟು ಕೇಸುಗಳಿವೆ ಎಂದರೆ ಸಾಕ್ಷಿ ನನ್ನ ಸ್ವಂತ ಆಸ್ತಿಗೆ ಸಂಬಂಧಿಸಿದಂತೆ ಒಂದು ಕೇಸು ಆಗಿದ್ದು, ಅದು ಮುಕ್ತಾಯ ಆಗಿದೆ ಅಂತಾ ಉತ್ತರಿಸುತ್ತಾರೆ.

4. ನೀವು ಎಲ್.ಎಲ್.ಬಿ ಪದವೀಧರರೂ ಆಗಿರುವುದಿಲ್ಲ ಹಾಗೂ ವಕೀಲರು ಅಲ್ಲ ಎಂದರೆ ಸರಿ. ಅದೇ ರೀತಿ ನೀವು ಬರಹಗಾರರು ಅಂತಾ ಲೈಸನ್ಸ್ ವಗೈರೆಯನ್ನು ಸಹ ಪಡೆದಿರುವುದಿಲ್ಲ ಎಂದರೆ ಸರಿ. ಆದ್ದರಿಂದ ನಿಮಗೆ ಕಾನೂನಿನ ಜ್ಞಾನವೂ ಸಹ ಇರುವುದಿಲ್ಲ ಎಂದರೆ ಸರಿ. ಹೊಸಾಳಿ, ಸದಾಶಿವಗಡ, ಅಸ್ನೋಟಿ ಪ್ರದೇಶಗಳಲ್ಲಿ ನುರಿತ ವಕೀಲರುಗಳು ಸಾಕಷ್ಟು ಇದ್ದಾರೆ ಎಂದರೆ ಸರಿ.

**ಮೂಲ ದಾವಾ ನಂಃ 12/2020**

**ಡಿ. ಡಬ್ಲ್ಯು 2**

5. ನೀವು ಸಲ್ಲಿಸಿರುವ ಮುಖ್ಯ ವಿಚಾರಣೆಯ ಪ್ರಮಾಣ ಪತ್ರವು ಈ ದಾವೆಯ ಪ್ರತಿವಾದಿ ಅವರ ವಕೀಲರಿಗೆ ಮಾಹಿತಿ ನೀಡಿ ತಯಾರಿಸಿರುವ ಪ್ರಮಾಣ ಪತ್ರ ಎಂದರೆ ಸರಿಯಲ್ಲ.

6. ಈ ಪ್ರಕರಣದಲ್ಲಿ ನಿಮಗೆ ಸಾಕ್ಷಿದಾರರಾಗಿ ಬರಬೇಕು ಅಂತಾ ಯಾರು ಯಾವಾಗ ಹೇಳಿದರು ಎಂದರೆ ಸಾಕ್ಷಿ ಪ್ರತಿವಾದಿ ಒಂದು ತಿಂಗಳ ಹಿಂದೆ ಹೇಳಿದ್ದರು ಅಂತಾ ಉತ್ತರಿಸುತ್ತಾರೆ.

7. ನನ್ನ ಮುಖ್ಯ ವಿಚಾರಣೆಯಲ್ಲಿ ಉಲ್ಲೇಖಿಸಿರುವ ವಿಲ್ ಬಗ್ಗೆ ಮೊದಲ ಬಾರಿಗೆ ನಿಮಗೆ ಯಾರು ಹೇಳಿದರು ಎಂದರೆ ಸಾಕ್ಷಿ ಲಲಿತ ಪುಂಡಲೀಕ ವಾಗಳೇಕರರವರು ಹೇಳಿದ್ದರು ಅಂತಾ ಉತ್ತರಿಸುತ್ತಾರೆ. ಯಾವ ದಿನಾಂಕದಂದು ಹೇಳಿದ್ದರು ಎಂದರೆ ಸಾಕ್ಷಿ 2018 ರ ಫೆಬ್ರವರಿ ತಿಂಗಳ ಕೊನೆಯ ವಾರದಲ್ಲಿ ಹೇಳಿದ್ದರು ಅಂತಾ ಉತ್ತರಿಸುತ್ತಾರೆ. ಅವರು ಆ ರೀತಿ ಹೇಳಿದಾಗ ನೀವು ಅವರಿಗೆ ಸದಾಶಿವಗಡ, ಹೊಸಾಳಿ ಹಾಗೂ ಅಸ್ನೋಟಿಯಲ್ಲಿ ಸಾಕಷ್ಟು ವಕೀಲರಿದ್ದಾರೆ ಅವರ ಬಳಿ ಹೋಗಿ ಬರೆಯಿಸಿ ಅಂತಾ ಸಲಹೆ ನೀಡಿದ್ದೀರಾ ಎಂದರೆ ಸಾಕ್ಷಿ ಇಲ್ಲ ಅಂತಾ ಉತ್ತರಿಸುತ್ತಾರೆ. ನೀವೇ ಅವರಿಗೆ ನಾನು ಬರೆದುಕೊಡುತ್ತೇನೆ ಅಂತಾ ಹೇಳಿದ್ದೀರಾ ಎಂದರೆ ಸಾಕ್ಷಿ ಹೌದು ಅಂತಾ ಉತ್ತರಿಸುತ್ತಾರೆ. ನೀವು ಬರೆದಿದ್ದೀರಿ ಅಂತಾ ಹೇಳಲಾದ ವಿಲ್ ಅನ್ನು ಯಾವ ಕಾಗದದ ಮೇಲೆ ಬರೆದಿದ್ದೀರಿ ಎಂದರೆ ಸಾಕ್ಷಿ ರೂ. 100 ರ ಛಾಪಾ ಕಾಗದದ ಮೇಲೆ ಬರೆದಿದ್ದೇನೆ ಅಂತಾ ಉತ್ತರಿಸುತ್ತಾರೆ. ಛಾಪಾ ಕಾಗದವನ್ನು ಯಾರು ಖರೀದಿಸಿದ್ದರು ಎಂದರೆ ಸಾಕ್ಷಿ ನಾನೇ ಖರೀದಿಸಿದ್ದೆ ಅಂತಾ ಉತ್ತರಿಸುತ್ತಾರೆ. ಅದನ್ನು ಎಲ್ಲಿ ಖರೀದಿಸಿದ್ದೀರಿ ಎಂದರೆ ಸಾಕ್ಷಿ ದುರ್ಗಾ ಮಾತಾ ಕ್ರೆಡಿಟ್ ಸೊಸೈಟಿಯಲ್ಲಿ ಖರೀದಿಸಿದ್ದೆ ಅಂತಾ ಉತ್ತರಿಸುತ್ತಾರೆ. ಯಾವ ದಿನಾಂಕ ಹಾಗೂ ಯಾವ ಸಮಯದಲ್ಲಿ ಖರೀದಿಸಿದ್ದೀರಿ ಎಂದರೆ ಸಾಕ್ಷಿ ಮಾರ್ಚ್ 7 ನೇ ತಾರೀಖು ಮಧ್ಯಾಹ್ನ 2-30 ಗಂಟೆಯ ನಂತರ ಖರೀದಿಸಿದ್ದೆ ಅಂತಾ ಉತ್ತರಿಸುತ್ತಾರೆ. ಯಾವುದೇ ಛಾಪಾ ಕಾಗದವನ್ನು ಖರೀದಿಸಬೇಕಾದರೆ ಮಾಹಿತಿಯನ್ನು ನೀಡಬೇಕಾಗುತ್ತದೆ ಎಂದರೆ ಸರಿ. ಆ ಮಾಹಿತಿಯಲ್ಲಿ ಯಾವ ಉದ್ದೇಶಕ್ಕಾಗಿ ಹಾಗೂ 1 ನೇ ಪಕ್ಷಗಾರರು ಯಾರು ಹಾಗೂ 2 ನೇ ಪಕ್ಷಗಾರರು ಯಾರು ಎಂಬ ವಿಷಯವನ್ನು ತಿಳಿಸಬೇಕಾಗುತ್ತದೆ ಎಂದರೆ ಸರಿ. ಅದೇ ರೀತಿ ಯಾರು ಛಾಪಾ ಕಾಗದವನ್ನು ಖರೀದಿಸುತ್ತಾರೋ ಅವರ ಹೆಸರು ಛಾಪಾ ಕಾಗದದಲ್ಲಿ ಮುದ್ರಿತವಾಗುತ್ತದೆ ಎಂದರೆ ಸರಿ. ನೀವು ಖರೀದಿಸಿದ್ದೀರಿ ಎನ್ನಲಾದ ಛಾಪಾ ಕಾಗದದಲ್ಲಿ ನಿಮ್ಮ ಹೆಸರು ಮುದ್ರಿತವಾಗಿದೆಯಾ ಎಂದರೆ ಸಾಕ್ಷಿ ಇಲ್ಲ ಅಂತಾ ಉತ್ತರಿಸುತ್ತಾರೆ. ನೀವು ಸದ್ರಿ ಛಾಪಾ ಕಾಗದವನ್ನು ಯಾವ ಉದ್ದೇಶಕ್ಕಾಗಿ ಖರೀದಿಸಿದ್ದೀರಿ ಎಂದರೆ ಮೃತ್ಯು ಪತ್ರ ಬರೆಯುವ ಉದ್ದೇಶಕ್ಕಾಗಿ ಖರೀದಿಸಿದ್ದೆ ಅಂತಾ

ಉತ್ತರಿಸುತ್ತಾರೆ. ಛಾಪಾ ಕಾಗದವನ್ನು ಖರೀದಿಸುವಾಗ ಅದನ್ನು ಮೃತ್ಯು ಪತ್ರ ಬರೆಯುವ ಸಲುವಾಗಿ ಖರೀದಿಸುತ್ತಿದ್ದೇನೆ ಹೇಳಿದ್ದೀರಾ ಎಂದರೆ ಸಾಕ್ಷಿ ಹೌದು ಅಂತಾ ಉತ್ತರಿಸುತ್ತಾರೆ. ಸದ್ರಿ ಛಾಪಾ ಕಾಗದ ಮೃತ್ಯು ಪತ್ರದ ಉದ್ದೇಶಕ್ಕೆ ಖರೀದಿಸಲಾಗಿದೆ ಎಂದು ನಮೂದಿಸಲಾಗಿದೆಯಾ ಎಂದರೆ ಸಾಕ್ಷಿ ನಮೂದಿಸಲಾಗಿದೆ ಅಂತಾ ಉತ್ತರಿಸುತ್ತಾರೆ.

8. ನಿಮಗೆ ಗಣಕಯಂತ್ರ ಉಪಯೋಗಿಸಲು ಬರುತ್ತದೆಯೇ ಎಂದರೆ ಸಾಕ್ಷಿ ಇಲ್ಲಾ ಅಂತ ಉತ್ತರಿಸುತ್ತಾರೆ. ನೀವು ಬರೆದಿದ್ದೀರಿ ಎನ್ನಲಾದ ಮೃತ್ಯು ಪತ್ರ ಕೈಬರಹದಲ್ಲಿ ಇದೆಯೋ ಅಥವಾ ಬೆರಳಚ್ಚು ಅಥವಾ ಕಂಪ್ಯೂಟರೀಕೃತವಾಗಿದೆಯೋ ಎಂದರೆ ಸಾಕ್ಷಿ ಟೈಪಿಂಗ್ ಬೆರಳಚ್ಚಿನಲ್ಲಿ ಮಾಡಲಾಗಿದೆ ಅಂತ ಉತ್ತರಿಸುತ್ತಾರೆ. ಯಾರ ಬಳಿ ಬೆರಳಚ್ಚು ಮಾಡಿಸಿದ್ದೀರಿ ಎಂದರೆ ಸಾಕ್ಷಿ ಅವರ ಹೆಸರು ನನಗೆ ಗೊತ್ತಿಲ್ಲ, ಅವರ ಅಂಗಡಿಯ ಹೆಸರು ಸಹ ನನಗೆ ಗೊತ್ತಿಲ್ಲ. ಬೆರಳಚ್ಚು ಮಾಡಿದವರು ಲೈಸೆನ್ಸ ಹೊಂದಿರುವ ಬರಹಗಾರರೋ ಅಥವಾ ವಕೀಲರೋ ಎಂದರೆ ಸಾಕ್ಷಿ ಲೈಸೆನ್ಸ ಹೊಂದಿರುವ ಬರಹಗಾರರು ಅಂತ ಉತ್ತರಿಸುತ್ತಾರೆ. ಯಾವುದೇ ಲೈಸೆನ್ಸ ಹೊಂದಿರುವ ಬರಹಗಾರರು ಅಥವಾ ವಕೀಲರು ಒಂದು ದಸ್ತಾವೇಜನ್ನು ಬರೆದರೆ ಅವರು ಬರೆದಿರುವ ಬಗ್ಗೆ ಹೆಸರು ನಮೂದಿಸಿ ಸಹಿ ಮಾಡುತ್ತಾರೆ ಎಂದರೆ ಸರಿ. ನೀವು ಹೇಳುವ ಮೃತ್ಯು ಪತ್ರದಲ್ಲಿ ಬೆರಳಚ್ಚು ಮಾಡಿರುವ ವ್ಯಕ್ತಿಯ ಹೆಸರು ಮತ್ತು ಸಹಿ ಇದೆಯಾ ಎಂದರೆ ಸಾಕ್ಷಿ ಈಗ ನೆನಪಿಲ್ಲ ಅಂತ ಉತ್ತರಿಸುತ್ತಾರೆ. ಅವರಿಗೆ ಬೆರಳಚ್ಚು ಮಾಡಲು ಮಾಹಿತಿ ಯಾರು ನೀಡಿದರು ಎಂದರೆ ಸಾಕ್ಷಿ ನಾನೇ ಕೊಟ್ಟಿರುತ್ತೇನೆ ಅಂತ ಉತ್ತರಿಸುತ್ತಾರೆ. ಬೆರಳಚ್ಚು ಮಾಡುವ ಸಮಯದಲ್ಲಿ ಲಲಿತಾ ವಾಗಳೆಕರರವರು ಅಲ್ಲಿ ಇರಲಿಲ್ಲ. ನೀವೇನಾದರೂ ಆ ಮೃತ್ಯ ಪತ್ರದ ಮೇಲೆ ಬರಹಗಾರ ಅಂತ ಸಹಿ ಮಾಡಿದ್ದೀರಾ ಎಂದರೆ ಸಾಕ್ಷಿ ನಾನು ಸಾಕ್ಷಿಯಾಗಿ ಮಾತ್ರ ಸಹಿ ಮಾಡಿದ್ದೆ ಅಂತ ಉತ್ತರಿಸುತ್ತಾರೆ. ನೀವು ಹೇಳುವ ಬೆರಳಚ್ಚನ್ನು ಎಷ್ಟು ಹೊತ್ತಿಗೆ ಮಾಡಿಸಿದ್ದೀರಿ ಎಂದರೆ ಸಾಕ್ಷಿ ಮಧ್ಯಾಹ್ನ 3-45 ರ ಹೊತ್ತಿಗೆ ಮಾಡಿಸಿದ್ದೆ ಅಂತ ಉತ್ತರಿಸುತ್ತಾರೆ.

9. ನೀವು ಅಂಚೆ ಇಲಾಖೆಯಲ್ಲಿ ಕೆಲಸ ಮಾಡುತ್ತಿದ್ದುದರಿಂದ ಹಲವು ಜನರ ಸಹಿ ಹಾಗೂ ಹೆಬ್ಬೆಟ್ಟನ್ನು ಪಡೆಯುವುದು ನಿಮ್ಮ ಕೆಲಸದ ವ್ಯಾಪ್ತಿಯಲ್ಲಿ ಬರುತ್ತದೆ ಎಂದರೆ ಸರಿ. ಯಾವುದೇ ವ್ಯಕ್ತಿಯ ಹೆಬ್ಬೆಟ್ಟಿನ

ಗುರುತನ್ನು ಒಂದು ಕಾಗದಕ್ಕೆ ತೆಗೆದುಕೊಂಡಾಗ ಅದು ಆ ವ್ಯಕ್ತಿಯ ಹೆಬ್ಬೆಟ್ಟಿನ ಗುರುತು ಎಂಬುದಾಗಿ ನಮೂದಿಸಬೇಕು ಎಂಬ ವಿಷಯ ನನಗೆ ಗೊತ್ತಿದೆ.

10. ಲಲಿತಾ ವಾಗಳೇಕರರವರು ಮಾಡಿದ್ದಾರೆ ಎನ್ನಲಾದ ಮೃತ್ಯು ಪತ್ರದಲ್ಲಿ ಸಹಿ ಮಾಡಿದ್ದಾರೋ ಅಥವಾ ಹೆಬ್ಬೆಟ್ಟಿನ ಗುರುತನ್ನು ಹಾಕಿದ್ದಾರೋ ಎಂದರೆ ಸಾಕ್ಷಿ ಹೆಬ್ಬೆಟ್ಟಿನ ಗುರುತನ್ನು ಹಾಕಿದ್ದಾರೆ ಅಂತ ಉತ್ತರಿಸುತ್ತಾರೆ. ಅವರು ಹೆಬ್ಬೆಟ್ಟಿನ ಗುರುತನ್ನು ಹಾಕಿದ್ದಾರೆ ಎನ್ನಲಾದ ಜಾಗದಲ್ಲಿ LTM ಎಂಬುದಾಗಿ ಬರೆದಿದ್ದಾರಾ ಎಂದರೆ ಸಾಕ್ಷಿ ಇಲ್ಲಾ ಅಂತ ಉತ್ತರಿಸುತ್ತಾರೆ. ಒಂದು ವೇಳೆ ನಿಮ್ಮ ಸಮಕ್ಷಮದಲ್ಲಿ ಯಾವುದೇ ಕಾಗದಪತ್ರಕ್ಕೆ ವ್ಯಕ್ತಿಯ ಹೆಬ್ಬೆಟ್ಟಿನ ಗುರುತನ್ನು ಹಾಕಿದಲ್ಲಿ LTM ಅಂತ ನಮೂದು ಮಾಡುತ್ತೀರಿ ಎಂದರೆ ಸರಿ.

11. ಕೋಯರ್ ವಾಗಳೇಕರರವರ ಪರಿಚಯ ನಿಮಗೆ ಇದೆಯಾ ಎಂದರೆ ಸಾಕ್ಷಿ ಇಲ್ಲಾ ಅಂತ ಉತ್ತರಿಸುತ್ತಾರೆ. ಅವರ ಮಗ ಪುಂಡಲೀಕನ ಪರಿಚಯ ನಿಮಗೆ ಇದೆಯಾ ಎಂದರೆ ಸಾಕ್ಷಿ ಇದೆ ಅಂತ ಉತ್ತರಿಸುತ್ತಾರೆ. ಪುಂಡಲೀಕನ ತಂದೆ ಕೋಯರ್ ವಾಗಳೇಕರರವರಿಗೆ ಇಬ್ಬರು ಮಕ್ಕಳು ಎಂದರೆ ಸಾಕ್ಷಿ ಒಬ್ಬನೇ ಮಗ ಆತ ಪುಂಡಲೀಕ ಅಂತ ಉತ್ತರಿಸುತ್ತಾರೆ. ಪುಂಡಲೀಕನ ತಾಯಿ ಹೆಸರು ನನಗೆ ಗೊತ್ತಿಲ್ಲ. ಪುಂಡಲೀಕನ ತಂದೆ ತಾಯಿಗೆ ಪುಂಡಲೀಕ ಎಂಬ ಮಗನಲ್ಲದೇ ದೇವಕಿ ಎಂಬ ಸಹೋದರಿ ಇದ್ದಾಳೆ ಎಂದರೆ ನನಗೆ ಗೊತ್ತಿಲ್ಲ. ಸದರಿ ದೇವಕಿಗೆ 6 ಜನ ಹೆಣ್ಣುಮಕ್ಕಳು ಇದ್ದರು ಎಂದರೆ ನನಗೆ ಗೊತ್ತಿಲ್ಲ.

12. ಹೋಸಾಳಿ ಮತ್ತು ತೊರ್ಲೆಬಾಗ್ ಅಕ್ಕಪಕ್ಕದ ಊರುಗಳು ಎಂದರೆ ಸರಿ. ಆ ಎರಡು ಊರುಗಳಿಗೆ ಸುಮಾರು ಒಂದರಿಂದ ಒಂದುವರೆ ಕಿ.ಮಿ. ಅಂತರ ಇದೆ. ನಿಮ್ಮ ಸಹೋದರಿಯನ್ನು ಮದುವೆ ಮಾಡಿ ತೊರ್ಲೆಬಾಗ್ ಎಂಬ ಊರಿಗೆ ಕೊಡಲಾಗಿದೆ ಎಂದರೆ ಸರಿ. ಆದ್ದರಿಂದ ನೀವು ತೊರ್ಲೆಬಾಗ್ ಊರಿಗೆ ಹೋಗಿ ಬರುವುದು ಮಾಡುತ್ತಿದ್ದೀರಿ ಎಂದರೆ ಸಾಕ್ಷಿ ಹೆಚ್ಚಾಗಿ ನನ್ನ ಬಾವ ನೌಕರಿ ಮಾಡುತ್ತಿದ್ದುದರಿಂದ ನಾನು ಹೋಗುವುದು ಕಡಿಮೆ ಇತ್ತು ಅಂತ ಉತ್ತರಿಸುತ್ತಾರೆ. ನೀವು ತೊರ್ಲೆಬಾಗ್ ಊರಿಗೆ ಪದೇ ಪದೇ ಹೋಗುತ್ತಿದ್ದುರಿಂದ ಆ ಊರಿನಲ್ಲಿ ನಿಮಗೆ ತುಂಬಾ ಜನರ ಪರಿಚಯ ಇದೆ ಎಂದರೆ ಸರಿಯಲ್ಲ.

**ಮೂಲ ದಾವಾ ನಂಃ 12/2020**

**ಡಿ. ಡಬ್ಲ್ಯು 2**

13. ಪ್ರತಿವಾದಿ ಹಾಗೂ ಲಲಿತಾ ವಾಗಳೇಕರರವರ ನಡುವಿನ ಸಂಬಂಧ ಏನು ಎಂದರೆ ಸಾಕ್ಷಿ ಅಕ್ಕ-ತಮ್ಮ ಸಂಬಂಧ ಅಂತ ಉತ್ತರಿಸುತ್ತಾರೆ.

14. ನೀವು ಬರೆದಿದ್ದೀರಿ ಎನ್ನಲಾದ ಮೃತ್ಯು ಪತ್ರದಲ್ಲಿ ಪ್ರತಿವಾದಿ ಹಾಗೂ ಲಲಿತಾ ವಾಗಳೇಕರರವರ ಸಂಬಂಧವನ್ನು ಉಲ್ಲೇಖಿಸಿದ್ದೀರಾ ಎಂದರೆ ಸಾಕ್ಷಿ ಹೌದು ಅಂತ ಹೇಳುತ್ತಾ ಚಿಕ್ಕಪ್ಪನ ಮಗ ಅಂತ ಬರೆಯಿಸಿದ್ದೇನೆ ಅಂತ ಉತ್ತರಿಸುತ್ತಾರೆ.

15. ನೀವು ಅಂಚೆ ಇಲಾಖೆಯಲ್ಲಿ ಕೆಲಸ ಮಾಡುತ್ತಿದ್ದುದರಿಂದ ಯಾವುದೇ ಕಾಗದಪತ್ರಗಳಲ್ಲಿ ಬರೆಯುವಾಗ ತಪ್ಪುಗಳು ಆಗಿದ್ದಲ್ಲಿ ಅದಕ್ಕೆ ಚಿಕ್ಕ ಸಹಿ ಮಾಡಿ ಸರಿಪಡಿಸಬೇಕಾಗುತ್ತದೆ ಎಂಬ ವಿಷಯ ನಿಮಗೆ ಗೊತ್ತಿದೆ ಎಂದರೆ ಸರಿ. ನೀವು ತಯಾರಿಸಿದ್ದೀರಿ ಎನ್ನಲಾದ ಮೃತ್ಯು ಪತ್ರದಲ್ಲಿ ಅಂತಹ ಯಾವುದೇ ತಿದ್ದುಪಡಿ ಮಾಡಿ ಚಿಕ್ಕ ಸಹಿ ಮಾಡಿದ್ದು ಇದೆಯಾ ಎಂದರೆ ಸಾಕ್ಷಿ ಇಲ್ಲಾ ಅಂತ ಉತ್ತರಿಸುತ್ತಾರೆ. ನಿಮ್ಮ ಪ್ರಕಾರ ಸದರಿ ಮೃತ್ಯು ಪತ್ರದಲ್ಲಿ ಯಾವುದೇ ಚಿತ್ತುಗಳು, ತಿದ್ದುಪಡಿಗಳು ಇಲ್ಲಾ ಅನ್ನುತ್ತೀರಾ ಎಂದರೆ ಸಾಕ್ಷಿ ಇಸವಿ ಬದಲಾಗಿರುವ ಬಗ್ಗೆ ಚಿತ್ತುಗಳು ಇವೆ ಅಂತ ಉತ್ತರಿಸುತ್ತಾರೆ. ಇಸವಿ ಬದಲಾಗಿರುವ ಬಗ್ಗೆ ಮೃತ್ಯು ಪತ್ರದಲ್ಲಿ ನಿವೇನಾದರೂ ಸಹಿ ಮಾಡಿದ್ದೀರಾ ಎಂದರೆ ಸಾಕ್ಷಿ ಇಲ್ಲಾ ಅಂತ ಉತ್ತರಿಸುತ್ತಾರೆ.

16. ನೀವು ಹೇಳುವ ಮೃತ್ಯು ಪತ್ರ ಬೆರಳಚ್ಚು ಮಾಡಿಸುವಾಗ ಪ್ರತಿವಾದಿ ಇದ್ದರಾ ಎಂದರೆ ಸಾಕ್ಷಿ ಇಲ್ಲಾ ಅಂತ ಉತ್ತರಿಸುತ್ತಾರೆ.

17. ಲಲಿತಾ ವಾಗಳೇಕರರವರು ಮೃತ್ಯು ಪತ್ರಕ್ಕೆ ಯಾವ ಸ್ಥಳದಲ್ಲಿ ಸಹಿ ಮಾಡಿರುತ್ತಾರೆ ಎಂದರೆ ಸಾಕ್ಷಿ ನಮ್ಮ ಮನೆಯಲ್ಲಿ ಸಹಿ ಮಾಡಿರುತ್ತಾರೆ ಅಂತ ಉತ್ತರಿಸುತ್ತಾರೆ. ಆ ಸಮಯದಲ್ಲಿ ಪ್ರತಿವಾದಿ ಇದ್ದರಾ ಎಂದರೆ ಸಾಕ್ಷಿ ಇಲ್ಲಾ ಅಂತ ಉತ್ತರಿಸುತ್ತಾರೆ.

**ಮೂಲ ದಾವಾ ನಂಃ 12/2020**

**ಡಿ. ಡಬ್ಲ್ಯು 2**

18. ಲಲಿತಾ ವಾಗಳೇಕರರವರು ಹಾಗೂ ಅವರ ಕುಟುಂಬದವರಿಗೆ ಮಾನಸಿಕ ಖಾಯಿಲೆ ಇದೆ ಎಂದರೆ ಸಾಕ್ಷಿ ಇರಬಹುದು ಆದರೆ ಅವರು ಚೆನ್ನಾಗಿದ್ದರು ಅಂತ ಉತ್ತರಿಸುತ್ತಾರೆ. ಸದರಿ ಲಲಿತಾ ವಾಗಳೇಕರವರಿಗೆ ಎಷ್ಟು ಜನ ಸಹೋದರ ಸಹೋದರಿಯವರು ಎಂದರೆ ಸಾಕ್ಷಿ 7-8 ಮಂದಿ ಅಂತ ಉತ್ತರಿಸುತ್ತಾರೆ. ಆ ಪೈಕಿ ಸುಮಾರು 2 -3 ಮಂದಿ ಮಾನಸಿಕ ಖಾಯಿಲೆಯಿಂದಾಗಿ ತೀರಿಕೊಂಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಆ ಪೈಕಿ ಯಾರಾದರೂ ಮದುವೆ ಆಗಿದ್ದಾರಾ ಎಂದರೆ ಸಾಕ್ಷಿ ಇಲ್ಲಾ ಅಂತ ಉತ್ತರಿಸುತ್ತಾರೆ.

19. ಲಲಿತಾ ವಾಗಳೇಕರವರು ಮಾನಸಿಕ ಅಸ್ವಸ್ಥರಾಗಿದ್ದು ಅವರಿಗೆ ಯಾವುದೇ ಲೋಕಜ್ಞಾನ ಇರಲಿಲ್ಲ ಎಂದರೆ ಸಾಕ್ಷಿ ಅವರು ಮನೆಯಲ್ಲಿಯೇ ಇದ್ದು ಹೊರಗಡೆ ಹೋಗುತ್ತಿರಲಿಲ್ಲ ಅಂತ ಉತ್ತರಿಸುತ್ತಾರೆ.

20. ಲಲಿತಾ ವಾಗಳೇಕರವರು ನಿಮ್ಮ ಮನೆಯಲ್ಲಿ ಮೃತ್ಯು ಪತ್ರಕ್ಕೆ ಸಹಿ ಮಾಡಿದ್ದರು ಎನ್ನಲಾದ ಸಮಯದಲ್ಲಿ ಎಷ್ಟು ಜನರಿದ್ದರು ಎಂದರೆ ಸಾಕ್ಷಿ ನಾನು, ಕಿರಣ ಗುರುದಾಸ ನಾಯ್ಕ ಎಂಬ ಎರಡನೇ ಸಾಕ್ಷಿ ಹಾಗೂ ಲಲಿತಾ ಪುಂಡಲೀಕ ವಾಗಳೇಕರವರು ಇದ್ದರು ಅಂತ ಉತ್ತರಿಸುತ್ತಾರೆ. ಲಲಿತಾ ವಾಗಳೇಕರವರು ನಿಮ್ಮ ಪ್ರಕಾರ ಮೃತ್ಯುಪತ್ರಕ್ಕೆ ಒಟ್ಟೂ ಎಷ್ಟು ಸಹಿಗಳನ್ನು ಮಾಡಿರುತ್ತಾರೆ ಎಂದರೆ ಸಾಕ್ಷಿ ಒಟ್ಟೂ 4 ಸಹಿಗಳನ್ನು ಮಾಡಿರುತ್ತಾರೆ ಅಂತ ಉತ್ತರಿಸುತ್ತಾರೆ. ಅವುಗಳು ಅವರದ್ದೇ ಸಹಿ ಅಂತ ಹೇಳಲು ಅವರ ಹೆಸರನ್ನು ಬರೆಯಲಾಗಿದೆಯಾ ಎಂದರೆ ಸಾಕ್ಷಿ ಇಲ್ಲಾ ಅಂತ ಉತ್ತರಿಸುತ್ತಾರೆ. ನೀವು ಹೇಳುವ ಮೃತ್ಯುಪತ್ರಕ್ಕೆ ಯಾವ ದಿನಾಂಕವನ್ನು ನಮೂದಿಸಲಾಗಿದೆ ಎಂಬುದನ್ನು ಹೇಳಬಹುದೆ ಎಂದರೆ ಸಾಕ್ಷಿ ದಿನಾಂಕ 07-03-2018 ಎಂದು ನಮೂದಿಸಲಾಗಿದೆ ಅಂತ ಉತ್ತರಿಸುತ್ತಾರೆ.

21. ನಿಮ್ಮ ಮನೆಯಲ್ಲಿ ಅಂಚೆ ಕಚೇರಿ ಇರುವುದರಿಂದ ಬಹಳಷ್ಟು ಜನರು ಬಂದು ಹೋಗುತ್ತಾರೆ ಎಂದರೆ ಸರಿ. ನೀವು ಹೇಳುವ ಮೃತ್ಯುಪತ್ರಕ್ಕೆ ಸಹಿ ಮಾಡುವ ಪ್ರಕ್ರಿಯೇ ಒಟ್ಟೂ ಎಷ್ಟು ಹೊತ್ತು ತಗಲಿರುತ್ತದೆ ಎಂದರೆ ಸಾಕ್ಷಿ ಸುಮಾರು ಒಂದು ಗಂಟೆ ತಗಲಿರುತ್ತದೆ ಅಂತ ಉತ್ತರಿಸುತ್ತಾರೆ. ಆ ಸಮಯದಲ್ಲಿ ಊರಿನ ಜನರು ಯಾರಾದರೂ ಬಂದಿದ್ದರಾ ಎಂದರೆ ಸಾಕ್ಷಿ ಇಲ್ಲಾ ಅಂತ ಉತ್ತರಿಸುತ್ತಾರೆ. ನೀವು ಹೇಳುವ ಇನ್ನೊಬ್ಬ

**ಮೂಲ ದಾವಾ ನಂಃ 12/2020**

**ಡಿ. ಡಬ್ಲ್ಯು. 2**

ಸಾಕ್ಷಿದಾರರಾದ ಕಿರಣ ಗುರುದಾಸ ನಾಯ್ಕುರವರನ್ನು ಯಾರು ಕರೆದಿದ್ದರು ಎಂದರೆ ಸಾಕ್ಷಿ ಲಲಿತಾ ಪುಂಡಲೀಕ ವಾಗಳೇಕರವರು ಕರೆದಿದ್ದರು ಅಂತ ಉತ್ತರಿಸುತ್ತಾರೆ.

**(ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದು, ಸಮಯಾವಕಾಶ ನೀಡಿ ಮುಂದೂಡಲಾಯಿತು.)**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)**

**ಓ.ಹೇ.ಕೇ. ಸರಿ ಇದೆ**

**ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು**
**ಕಾರವಾರ.**